ಬಿಜಾಪುರ ಜಿಲ್ಲೆಯ ಹೊಳೆಬಾದಾಮಿ ಮತ್ತು ಪಟ್ಟದ ಕಲ್ಲುಗಳಿಗೆ ಸೂಪರ್ ಡಿಲೆಕ್ಸ್ ಬಸ್ಸುಗಳನ್ನೋಡಿಸುವುದು.

1176 - ಶ್ರೀ ಹೆಚ್.ವೈ. ಮೇಟಿ (ಗುಳೇದಗುಡ್ಡ) ; ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಬಿಜಾಪುರ ಜಿಲ್ಲೆಯ ಐಹೊಳೆ ಬಾದಾಮಿ ಮತ್ತು ಪಟ್ಟದಕಲ್ಲುಗಳಿಗೆ ಸೂಪರ್ ಡಿಲೆಕ್ಸ್ ಬಸ್ಸುಗಳನ್ನು ಓಡಿಸುತ್ತಿದೆಯೇ?

ಆ) ಹಾಗಿಲ್ಲದಿದ್ದಲ್ಲಿ, ಸರ್ಕಾರವು ಭಾರತ ಸಂದರ್ಶಿಸಿ ವರ್ಷ 1991 ರಲ್ಲಿ ಮೇಲ್ಕಂಡ ಸ್ಥಳಗಳಿಗೆ ಸೂಪರ್ ಡೀಲಕ್ಸ್ ಬಸ್ಸುಗಳನ್ನು ಓಡಿಸಲು ಕ್ರಮಗಳನ್ನು ತೆಗೆದುಕೊಳ್ಳುವುದೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಬೆಂಗಳೂರಿನಿಂದ ಬಾದಾಮಿ ಮಾರ್ಗವಾಗಿ ಬಾಗಲಕೋಟೆಗೆ ಒಂದು ಸುಖಾಸೀನ ಸಾರಿಗೆಯನ್ನು ಓಡಿಸಲಾಗುತ್ತಿದೆ. ಮತ್ತು ಐಹೊಳೆ ಮತ್ತು ಪಟದಕಲ್ಲುಗಳನ್ನು ಬಿಟ್ಟು.

ಆ) ಪ್ರವಾಸೋದ್ಯಮ ಇಲಾಖೆಯನ್ನು ಸರ್ಕಾರವು ಸಲಹೆಯನ್ನು ಕೇಳಲಾಗಿ ವಿಶೇಷ ಸಾರಿಗೆ ಸೌಲಭ್ಯವನ್ನು ಮೇಲಿನ ಸ್ಥಳಗಳಿಗೆ ಕಲ್ಪಿಸಲಾಗಿದೆ. ಅವಶ್ಯಕತೆ ಇದ್ದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರನ್ನು ಕೇಳಿದರೆ ಸೌಲಭ್ಯವನ್ನು ಒದಗಿಸಲಾಗುವುದು.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸುವುದು

1199 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಬೆಳ್ಳ) ; ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರ್, ಮೂರು ಜಿಲ್ಲೆಗಳ ಕೇಂದ್ರ ಸ್ಥಳವಾಗಿದ್ದು ಒಂದು ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಲು ಕೇಂದ್ರ ಸ್ಥಾನದಲ್ಲಿದೆ ಎಂಬ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಾದರೆ ಹುಳಿಯಾರ್‌ನ ಸುತ್ತಮುತ್ತ ಎಷ್ಟು ಪೂರಕ ಹೈಸ್ಕೂಲ್‌ಗಳು ಇವೆ?

ಇ) 1991-92 ನೇ ಸಾಲಿನಲ್ಲಿ ಸರ್ಕಾರವು ಒಂದು ಪ್ರಥಮ ದರ್ಜೆ ಕಾಲೇಜನ್ನು ಮಂಜೂರು ಮಾಡುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ಹೌದು.

ಆ) 12 ಪ್ರೌಢಶಾಲೆಗಳು.

ಇ) 1991-92ನೇ ಸಾಲಿನಲ್ಲಿ ಹುಳಿಯಾರ್‌ನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಲು ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ತುಮಕೂರು ಜಿಲ್ಲೆಯಲ್ಲಿನ ಆಸ್ಪತ್ರೆಗಳ ಗ್ರೂಪ್ 'ಡಿ' ಹುದ್ದೆಗಳು.

1205 - ಶ್ರೀ ಶಫೀ ಅಹ್ಮದ್ (ತುಮಕೂರು) ; ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?